1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.21/2020

PW- 04

CW- 20

ಪ್ರ. ಬೋ. ದಿನಾಂಕಃ 17-02-2024

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಕಾವ್ಯಾ ಬಿ ಪಿ |
| ತಂದೆ/ಗಂಡನ ಹೆಸರು | : | ಪ್ರಕಾಶ್ ಬಿ ಎಂ, |
| ವಯಸ್ಸು | : | 26 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ | : | ಗೋಪನಾಳು ಗ್ರಾಮ, ದಾವಣಗೆರೆ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ-1 ನನ್ನ ತಾಯಿ, ಚಾಸಾ-11 ನನ್ನ ತಂದೆ , ಚಾಸಾ-9 ಮತ್ತು 10 ನನ್ನ ತಂಗಿ ಮತ್ತು ತಮ್ಮ. 1 ನೇ ಆರೋಪಿ ನನಗೆ ಗೊತ್ತು.

ನಾನು ಬಿ ಸಿ ಎ ವರೆಗೆ ವ್ಯಾಸಂಗ ವನ್ನು ದಾವಣಗೆರೆಯ ಬಾಪೂಜಿ ಕಾಲೇಜಿನಲ್ಲಿ ಮಾಡುತ್ತಿದ್ದೆ ಹಾಗೂ ದಾವಣಗೆರೆಯ ಶ್ರೀ ಸಾಯಿ ಅನ್ನಪೂರ್ಣ ಮಹಿಳಾ ಹಾಸ್ಟಲ್ ನಲ್ಲಿ ವಾಸ ಮಾಡುತ್ತಿದ್ದೆ. ನಾನು ಪೌಢಶಿಕ್ಷಣವನ್ನು ಸ್ಟೆಲ್ಲಾ ಮೇರಿಸ್ ಶಾಲೆಯಲ್ಲಿ ಮಾಡಿದ್ದೇನೆ.

1 ನೇ ಆರೋಪಿ ನಮ್ಮ ಊರಿನವನೆ. ಎಸ್ ಎಸ್ ಎಲ್ ಸಿ ಮುಗಿದ ನಂತರ ನನ್ನ ಸ್ನೇಹಿತರು ಫೆಸ್ ಬುಕ್ ಮತ್ತು ವಾಟ್ಸಪ್ ನಲ್ಲಿ ಗ್ರೂಪ್ ಮಾಡಿದ್ದರು. 1 ನೇ ಆರೋಪಿ ನನ್ನ ಸ್ನೇಹಿತ ಮೇಘರಾಜ ನ ಕಡೆಯಿಂದ ನನ್ನ ಮೋಬೈಲ್ ನಂಬರ್ ಪಡೆದಿದ್ದಾನೆ ಎಂದು ಗೊತ್ತಾಯಿತು. ಆ ನಂತರ 1 ನೇ ಆರೋಪಿ ನನಗೆ ಕರೆ ಮಾಡಿ , ನಾನು ನಿಮ್ಮ ಊರಿನವನೇ , ಮಿಟ್ರೆಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ಪರಿಚಯ ಮಾಡಿಕೊಂಡು, ನಂತರ ನನಗೆ ಮೆಸೇಜ್ ಗಳನ್ನು ಮಾಡುತ್ತಿದ್ದ , ಅದರಂತೆ ನಾನು ಅವನು ಸ್ನೇಹಿತರಾದೆವು . 2019 ನೇ ಇಸ್ವಿಯ ಗಣೇಶನ ಹಬ್ಬಕ್ಕೆ 1 ನೇ ಆರೋಪಿ ನಮ್ಮ ಊರಿಗೆ ಬಂದಿದ್ದ. ನಮ್ಮ ಪಕ್ಕದ ಮನೆಯ ಚಿಕ್ಕಪ್ಪ ಸಂತೋಷ ರವರ ಮನೆಗೆ ಬರುತ್ತಿದ್ದ , ಆ ಸಮಯದಲ್ಲಿ ನನ್ನ ಜೊತೆ ಮಾತನಾಡುತ್ತಿದ್ದ. ಅದರಂತೆ ನಾನು ಸಾಮಾನ್ಯವಾಗಿ ಸ್ನೇತರಾದಾಗ 1 ನೇ ಆರೋಪಿ ನಾನು

ನಿನ್ನನ್ನು ಪ್ರೀತಿಸುತ್ತಿದ್ದೇನೆ , ನನ್ನನ್ನು ಪ್ರೀತಿಸು ಎಂದು ಹೇಳುತ್ತಿದ್ದ. ನಾನು ಪ್ರೀತಿ ಮೇಲೆ ಇಷ್ಟ ಇಲ್ಲ , ನಾನು ಓದಬೇಕು , ಓದುವುದರ ಮೇಲೆ ನಾನು ಗಮನ ಹರಿಸಬೇಕು ಎಂದು ಹೇಳಿದೆ , ಆದರೂ ಸಹ ಆತ ನನಗೆ ಹಿಂಸೆ ಕೊಡುತ್ತಿದ್ದ. ನನ್ನ ಚಿಕ್ಕಪ್ಪನನ್ನು ನಿನ್ನ ಮನೆಗೆ ಹೆಣ್ಣು ಕೇಳಲು ಕಳುಹಿಸುತ್ತೇನೆ ಎಂದು ಹೇಳುತ್ತಿದ್ದ. ಆದರೂ ಸಹ ನಾನು ಇಷ್ಟ ಇಲ್ಲ ಎಂದು ಹೇಳಿದಾಗ – ನಿನ್ನ ತಾತನಿಗೆ ಮಿಲ್ಟ್ರಿಯಿಂದ ಡ್ರಿಂಕ್ಸ್ ತಂದು ಕೊಟ್ಟು , ನಾನು ಬುಟ್ಟಿಗೆ ಹಾಕಿಕೊಂಡಿದ್ದೇನೆ , ಅದೇ ರೀತಿ ನಿನ್ನ ತಂದೆಯನ್ನು ಸಹ ನಾನು ಯಾವ ರೀತಿ ಬುಟ್ಟಿಗೆ ಹಾಕಿಕೊಳ್ಳಬೇಕು ಎಂದು ಗೊತ್ತಿದೆ ಎಂದು ಹೆದರಿಸುತ್ತಿದ್ದ. ಅದಾದ ಸ್ವಲ್ಪ ದಿನದ ನಂತರ ಆತನ ತಾಯಿ ತೀರಿಕೊಂಡರು. ಆತನ ತಾಯಿಯ ಕಾರ್ಯವನ್ನು ಮುಗಿಸಿ , ಜನವರಿ ತಿಂಗಳಲ್ಲಿ ಒಂದು ದಿನ ದಾವಣಗೆರೆ ಬಾಪೂಜಿ ಕಾಲೇಜ್ ರಸ್ತೆಗೆ ಬಂದು , ನಿನ್ನ ಜೊತೆ ಮಾತನಾಡಬೇಕು ಬಾ ಎಂದು ಅಡ್ಡ ನಿಂತುಕೊಂಡ. ನಾನು ಆಗಾಗ ನಂಬರ್ ಚೇಂಜ್ ಮಾಡುತ್ತಿದ್ದೆ , ಅದಕ್ಕೆ ನೀನು ನಂಬರ್ ಕೊಡಲಿಲ್ಲ , ನಂಬರ್ ಕೊಡು , ಕೊಡು ಎಂದು ಕಾಡಿಸುತ್ತಿದ್ದ , ಆ ಸಮಯದಲ್ಲಿ ಒಂದು ಸಾವಿರ ಹಣ ಕೊಟ್ಟು ನಿನಗೆ ಖರ್ಚಿಗೆ ಬೇಕಾಗುತ್ತದೆ ಇಟ್ಟುಕೊಂ ಎಂದು ಕೊಟ್ಟ , ನಾನು ಬೇಡ ಬೇಡ ಎಂದು ಎಷ್ಟು ಹೇಳಿದರು ಕೇಳದೆ ಹಣ ಕೊಟ್ಟು ಹೋದ. ಆ ನಂತರ ನಾನು ಕಾಲೇಜ್ ಗೆ ಹೋಗಿ , ನಂತರ ಪಿ ಜಿ ಗೆ ಹೋದೆ. ಅದಾದ ಎರಡು ಮೂರು ದಿನದ ನಂತರ ನಾನು ನನ್ನ ಊರಿಗೆ ಹೋದೆ. ನಾನು ಆ ರೀತಿ ಊರಿಗೆ ಹೋದಾಗ ಅಲ್ಲೂ ಸಹ ಬಂದು ನಂಬರಿ ಕೊಡು ಎಂದು ಕೇಳಿದ , ನಾನು ಆತನಿಗೆ ನಂಬರ್ ಕೊಡಲಿಲ್ಲ. ಎರಡು ದಿನ ಊರಲ್ಲಿ ಇದ್ದ ನಂತರ ದಾವಣಗೆರೆಗೆಬರಲು ಹೊನ್ನಾಳಿಯಲ್ಲಿ ಬಸ್ಸನ್ನು ಹತ್ತಿದೆ , ಆಗ ಆತ ಕೂಡಲೇ ಬಸ್ಸಿಗೆ ಹತ್ತಿ ನನ್ನ ಪಕ್ಕದಲ್ಲಿ ಬಂದು ಕುಳಿತ. ಊರಿಗೆ ಬಂದು ನಂಬರ್ ಕೊಡುತ್ತೇನೆ ಎಂದು ಹೇಳಿದ್ದೆ , ನೀನು ನಂಬರ್ ಕೊಡಲಿಲ್ಲ, ಈಗ ಕೊಡು ಎಂದು ಪೀಡಿಸಿದ. ನಾನು ದಾವಣಗೆರೆಗೆ ಹೋದ ಕೊಡಲೇ ನಂಬರ್ ಕೊಡುತ್ತೇನೆ ಎಂದು ಹೇಳಿ ಹರಿಹರದಲ್ಲಿ ಆತನನ್ನು ಬಸ್ಸನ್ನು ಇಳಿಸಿ ವಾಪಸ್ ಕಳುಹಿಸಿದೆ. ನಾನು ದಾವಣಗೆರೆಗೆ ಬಂದ ಕೂಡಲೇ ನನ್ನ ತಂದೆಗೆ ಫೋನ್ ಕರೆ ಮಾಡಿ , 1 ನೇ ಆರೋಪಿ ದಾವಣಗೆರೆಗೆ ಬಂದು ಒಂದು ಸಾವಿರ ಹಣ ಕೊಟ್ಟು ಫೋನ್ ನಂಬರ್ ಕೊಡು ಎಂದು ಪೀಡಿಸಿದ , ಆ ನಂತರ ಬಸ್ ನಲ್ಲಿ ಬರಬೇಕಾದರೆ ಬಸ್ಸಿನಲ್ಲಿ ಕುಳಿತು ಫೋನ್ ನಂಬರ್ ಕೊಡು ಎಂದು ಪೀಡಿಸಿದ ,ಊರಲ್ಲಿ ಸಹ ಫೋನ್ ನಂಬರ್ ಕೊಡು ಎಂದು ಪೀಡಿಸಿದ ಎಂದು ಹೇಳಿದೆ. ಅದಾದ ನಂತರ ನನ್ನ ತಂದೆ ಊರಲ್ಲಿ ಈ ವಿಚಾರ ತಿಳಿಸಿ

,ಪಂಚಾಯಿತಿ ಮಾಡಿಸಿ , ನನಗೆ ಕೊಟ್ಟಿದ್ದ ಒಂದು ಸಾವಿರ ಹಣವನ್ನು ವಾಪಸ್ 1 ನೇ ಆರೋಪಿಗೆ ಕೊಡಿಸಿದರು.  ಆ ಸಮಯದಲ್ಲಿ 1 ನೇ ಆರೋಪಿ ನಿನ್ನನ್ನು ತಂಗಿ ತರಹ ನೋಡಿಕೊಳ್ಳುತ್ತೇನೆ , ಇನ್ನುಮುಂದೆ ಈ ರೀತಿ ಮಾಡುವುದಿಲ್ಲ ಎಂದು ಹೇಳಿದ್ದ. ಆ ನಂತರ 1 ನೇ ಆರೋಪಿ ಫೇಸ್ ಬುಕ್ ನಲ್ಲಿ ನನ್ನ ಫೋಟೋ ಹಾಕಿ, ಕೆಟ್ಟ ಶಬ್ದಗಳನ್ನು ಉಪಯೋಗಿಸಿ, ನನ್ನನ್ನು ಕೆಟ್ಟದಾಗಿ ಬಿಬಿಸುತ್ತಿದ್ದ ಹಾಗೂ ನನ್ನ ತಾಯಿಯ ಮೇಲೆ ಸಹ ಕೆಟ್ಟ ಪದಗಳನ್ನು ಉಪಯೋಗಿಸಿ ಪೋಸ್ಟ ಮಾಡುತ್ತಿದ್ದ.

ಈ ಹಿಂದೆ ಈ ಬಗ್ಗೆ ಹಲವಾರು ಬಾರಿ ಪಂಚಾಯಿತಿಗಳನ್ನು ಮಾಡಿದ್ದರೂ ಸಹ ಆತ ತನ್ನ ವರ್ತನೆಯನ್ನು ಸರಿ ಮಾಡಿಕೊಂಡಿರಲಿಲ್ಲ.

ದಿ.24-05-2019 ರಂದು ಸಂಜೆ 6-00 ಗಂಟೆಗೆ 1 ನೇ ಆರೋಪಿ ನನ್ನ ತಂಗಿಯ ಮದುವೆ ಇದೆ ಕಾವ್ಯಳನ್ನು ಕಳುಹಿಸಿಕೊಡಿ ಹಾಗೂ ಮೋಬೈಲ್ ನಂಬರ್ ಕೊಡಿ ಎಂದು ನಮ್ಮ ಹಾಸ್ಟಲ್ ವಾರ್ಡ್ ನ ಗೆ ಕರೆ ಮಾಡಿ ಕೇಳಿದ್ದ. ಆದರೆ ವಾರ್ಡನ್ ಆತನಿಗೆ ನನ್ನ ನಂಬರ್ ಕೊಟ್ಟಿರಲಿಲ್ಲ. ವಾರ್ಡನ್ ರವರು ನನ್ನ ತಂದೆ ತಾಯಿಗೆ ಸದರಿ ವಿಷಯವನ್ನು ತಿಳಿಸಿದಾಗ ನನ್ನ ತಂದೆ ತಾಯಿ 1 ನೇ ಆರೋಪಿ ವಾರ್ಡನ್ ಗೆ ಕರೆ ಮಾಡಿದ ನಂಬರ್ ಬಗ್ಗೆ ಪರಿಶೀಲಿಸಿದಾಗ ಅದು 1 ನೇ ಆರೋಪಿಯ ಮೋಬೈಲ್ ನಂಬರ್ ಆಗಿತ್ತು.

ದಿ.25-05-2019 ರಂದು ಬೆಳಗಿನ ಜಾವ 2-00 ಗಂಟೆ ಸಮಯದಲ್ಲಿ ನನ್ನ ತಾಯಿ ಫೋನ್ ಕರೆ ಮಾಡಿ , ಹೀಗೆ 1 ನೇ ಆರೋಪಿ ಮನೆಯ ಬಳಿ ಬಂದು ಗಲಾಟೆ ಮಾಡಿ , ನಿನ್ನ ತಂಗೆ ಗನ್ ನಿಂದ ಶೂಟ್ ಮಾಡಿ ಗಾಯಾಪಡಿಸಿದ್ದಾನೆ ಎಂದು ತಿಳಿಸಿದರು.  ನನಗೆ ಆ ಸಮಯದಲ್ಲಿ ಪರೀಕ್ಷೆ ಇದ್ದದ್ದರಿಂದ ಕೂಡಲೇ ಊರಿಗೆ ಹೋಗಲು ಆಗಲಿಲ್ಲ, ಅದಾದ ಒಂದು ವಾರದ ನಂತರ ಊರಿಗೆ ಹೋಗಿ ನನ್ನ ತಂದೆಯನ್ನು ನೋಡಿಕೊಂಡು, ಠಾಣೆಗೆ ಹೋಗಿ ಹೇಳಿಕೆಯನ್ನು ನೀಡಿರುತ್ತೇನೆ.

1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆತನ ಗುರುತಿಸುವಿಕೆ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

<u>ಪಾಟೀಸವಾಲು:-</u> ಆರೋಪಿತರ ಪರ ಶ್ರೀಮತಿ ಕೆ ಎನ್ ಯು ವಕೀಲರಿಂದ.

ಆರೋಪಿತರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು , ಕೋರಿಕೆ ಮೇರೆಗೆ ಪಾಟೀಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.21/2020

PW- 03

CW- 09

ಪ್ರ. ಬೋ. ದಿನಾಂಕಃ 16-02-2024

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಸೌಮ್ಯ ಬಿ ಪಿ |
| ತಂದೆ/ಗಂಡನ ಹೆಸರು | : | ಬಿ ಎನ್ ಪ್ರಕಾಶ್ |
| ವಯಸ್ಸು | : | 24 ವರ್ಷ |
| ಉದ್ಯೋಗ | : | ಖಾಸಗಿ ಕಂಪನಿಯಲ್ಲಿ ಕೆಲಸ |
| ವಾಸ | : | ಬೆಂಗಳೂರು |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ-1 ನನ್ನ ತಾಯಿ , ಚಾಸಾ-11 ನನ್ನ ತಂದೆ , ಚಾಸಾ-20 ನನ್ನ ಅಕ್ಕ. 1 ನೇ ಆರೋಪಿ ನನಗೆ ಗೊತ್ತು. ಆತ ನಮ್ಮ ಊರಿನವನು, ಈಗ ಆರ್ಮಿಯಲ್ಲಿ ಕೆಲಸ ಮಾಡುತ್ತಿದ್ದಾನೆ.

2019 ರಲ್ಲಿ ನನ್ನ ಅಕ್ಕ ಕಾವ್ಯ ದಾವಣಗೆರೆಯ ಬಾಪೂಜಿ ಕಾಲೇಜಿನಲ್ಲಿ ಬಿ.ಸಿ.ಎ, ವ್ಯಾಸಂಗ ಮಾಡುತ್ತಿದ್ದಳು. ಆಕೆ ದಾವಣಗೆಯ ಸಾಯಿ ಹಾಸ್ಟಲ್ ನಲ್ಲಿ ವಾಸ ಮಾಡುತ್ತಿದ್ದಳು. ನನ್ನ ವ್ಯಾಸಂಗ ಮಾಡುತ್ತಿದ್ದಗ ಆರೋಪಿ ನನ್ನ ಅಕ್ಕನಿಗೆ ಫೋನ್ ಮಾಡು , ಮೆಸೇಜ್ ಮಾಡು, ಪ್ರೀತಿ ಮಾಡು ಎಂದು ಪೀಡಿಸುತ್ತಿದ್ದ. ಈ ವಿಚಾರ ನನ್ನ ಅಕ್ಕ ನನ್ನ ತಂದೆ ತಾಯಿಗೆ ಹೇಳಿದಾಗ ನನಗೂ ಗೊತ್ತಾಗಿರುತ್ತದೆ. ಈ ವಿಚಾರವಾಗಿ ನಮ್ಮಊರಿನಲ್ಲಿ ನನ್ನ ತಂದೆ ತಾಯಿ ಹಿರಿಯರ ಸಮಕ್ಷಮ ಪಂಚಾಯಿತಿ ಮಾಡಿಸಿದ್ದರು. ಸದರಿ ಪಂಚಾಯಿತಿಯಲ್ಲಿ ಇನ್ನು ಮುಂದೆ ಆ ರೀತಿ ತೊಂದರೆ ಕೊಡುವುದಿಲ್ಲ , ನಾನು ತಂಗಿ ತರಹ ನೋಡಿಕೊಳ್ಳುತ್ತೇನೆ ಎಂದು 1 ನೇ ಆರೋಪಿ ಹೇಳಿದ್ದ. ಅದಾದ ಎರಡು ಮೂರು ತಿಂಗಳ ನಂತರ 1 ನೇ ಆರೋಪಿ ನನ್ನ ಅಕ್ಕನಿಗೆ ಫೋನ್ ಮಾಡು , ಮೆಸೇಜ್ ಮಾಡು , ಪ್ರೀತಿ ಮಾಡು ಎಂದು ಪೀಡಿಸುತ್ತಿದ್ದ. 1 ನೇ ಆರೋಪಿ ನನ್ನ ತಾಯಿಯ ವಿರುದ್ಧ ಅವಾಚ್ಯ ಶಬ್ದ ಗಳನ್ನು ಫೇಸ್ ಬುಕ್ ನಲ್ಲಿ ಹಾಕಿದ್ದ, 1 ನೇ ಆರೋಪಿ ನನ್ನ ಅಕ್ಕ , ನನ್ನ ತಂದೆ ತಾಯಿ ಯ ಫೋಟೋಗಳನ್ನು ಫೇಸ್ ಬುಕ್ ನಲ್ಲಿ ಹಾಕಿ

ಕೆಟ್ಟ ಪದಗಳನ್ನು ಉಪಯೋಗಿಸಿ ಮೆಸೇಜ್ ಮಾಡಿದ್ದ.

ದಿ.24-05-2019 ರಂದು ರಾತ್ರಿ ಸುಮಾರು 11-20 ಗಂಟೆ ಸಮಯದಲ್ಲಿ ನಾನು , ನನ್ನ ತಂದೆ ತಾಯಿ , ನನ್ನ ತಮ್ಮ, ತಂಗಿ ನಮ್ಮ ಮನೆಯಲ್ಲಿ ಮಲಗಿದ್ದಾಗ ಮನೆಯ ಹೊರಗಡೆ ಏನೋ ಶಬ್ದ ಕೇಳಿಸಿತು, ಆಗ ನನ್ನ ತಂದೆ ಎಚ್ಚರಗೊಂಡು ನಮ್ಮ ಮನೆಯ ಮುಂದೆ ಏನೋ ಶಬ್ದ ಆಗುತ್ತಿದೆ ಎಂದು ನಮ್ಮ ಗ್ರಾಮದ ನೀಲಕಂಠಪ್ಪ ಮತ್ತು ನಾಗರಾಜ್ ಬಿ ಹೆಚ್ ಎನ್ನುವವರಿಗೆ ಕರೆ ಮಾಡಿದರು , ನಮ್ಮ ತಾಯಿ ನನ್ನ ತಂದೆಗೆ ಅವರು ಬಂದ ಮೇಲೆ ನೋಡೋಣ , ಅಲ್ಲಿಯವರೆಗೆ ಕದ ತೆಗೆಯಬೇಡಿ ಎಂದು ಹೇಳಿದ್ದರು. ಪುನಃ ಶಬ್ದ ವನ್ನು ಕೇಳಿಸಿಕೊಂಡು ನಮ್ಮ ತಂದೆಯವರು ನಾನು ಕರೆ ಮಾಡಿದವರು ಬಂದಿರಬಹುದು ,ನೋಡೋಣ ಎಂದು ಬಾಗಿಲು ತೆಗೆದರು , ಆಗ 1 ನೇ ಆರೋಪಿ ನಮ್ಮ ಮನೆಯ ಬಾಗಿಲಬಳಿ ಎರಡು ಕೈಗಳಲ್ಲಿ ಪಿಸ್ತೂಲ್ ಹಿಡಿದು ನಿಂತಿದ್ದವನು ನನ್ನ ತಂದೆಯ ಹೊಟ್ಟೆಗೆ ಗುಂಡು ಹಾರಿಸಿದ. ನನ್ನ ತಂದೆಯವರು ಗುಂಡು ತಗುಲಿದ್ದನ್ನು ಲೆಕ್ಕಿಸದೇ ಕಲ್ಲನ್ನು ತೆಗೆದುಕೊಂಡು 1 ನೇ ಆರೋಪಿಯನ್ನು ಓಡಿಸಿಕೊಂಡು ಹೋದರು,ಆಗ ಆರೋಪಿ ದೇವಸ್ಥಾನದ ಬಳಿ ಓಡಿ ಹೋದ , ನಾವು ಸಹ ಹಿಂದೆ ಓಡಿ ಹೋದೆವು. ಆದರೆ 1 ನೇ ಆರೋಪಿ ಸಿಗಲಿಲ್ಲ. ನನ್ನ ತಂದೆಗೆ ಗುಂಡು ತಗುಲಿದ್ದರಿಂದ ದೇವಸ್ಥಾನದ ಬಳಿ ನನ್ನ ತಂದೆ ಸುಸ್ತಾಗಿ ಬಿದ್ದಿದ್ದರು. ಆಗ ಮಂಜುನಾಥ , ಶಶಿಕಾಂತ್ , ಆದರ್ಶ, ಸತೀಶ್ ಎನ್ನುವವರು ಬಂದರು. ನಂತರ ನನ್ನ ತಂದೆಯನ್ನು ನೀಲಕಂಠಪ್ಪನ ಕಾರಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದರು.

ಪೊಲೀಸರು ನನ್ನನ್ನು ಹೊನ್ನಾಳಿ ಕೊರ್ಟಿಗೆ ಕರೆದುಕೊಂಡು ಹೋದರು, ನಾನು ನಡೆದ ವಿಚಾರವನ್ನು ಹೇಳಿರುತ್ತೇನೆ.

ದಿ.25-05-2019 ರಂದು ಬೆಳಿಗ್ಗೆ ಚಾಸಾ-4 ಮತ್ತು 5 ರವರು ಪೊಲೀಸರ ಬಳಿ ಬಂದಿದ್ದರು, ನಮ್ಮ ಮನೆಯ ಬಳಿ ಬಿದ್ದಿದ್ದ ಒಂದು ಉದ್ದದ ಮಚ್ಚು , ಗುಂಡು ತುಂಬಿದ್ದ ಒಂದು ವ್ಯಾಗ್ಜಿನ್ , ಖಾಲಿ ಇದ್ದ ಮೂರು ಕೊಳವೆಗಳನ್ನು ಮಹಜರ್ ಮಾಡಿ , ಅಮಾನತ್ತುಪಡಿಸಿಕೊಂಡಿರುತ್ತಾರೆ.

ಸಾಕ್ಷಿ ಮಹಜರ್ ನಲ್ಲಿ ಇರುವ ತನ್ನಸಹಿಯನ್ನು ನೋಡಿ ಗುರುತಿಸಿದ್ದು , ಮಹಜರ್ ನ್ನು ನಿಪಿ.5 ಎಂದು , ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಕಚ್ಚಾ ನಕಾಶೆಯಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು , ನಕ್ಷೆಯನ್ನುನಿಪಿ.6 ಎಂದು ,

ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ.3 ಮತ್ತು 4 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಆರು ಫೊಟೋಗಳನ್ನು ನೋಡಿ ಗುರುತಿಸಿದ್ದು , ಅವುಗಳನ್ನು ನಿಪಿ.7 ರಿಂದ 12 ಎಂದು ಗುರುತಿಸಲಾಯಿತು. ಶೀಲ್ ಆಗಿರುವ ಬ್ಯಾಗನ್ನು ತೆರೆಯಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ - ಮೂರು ಹಾರಿಸಲಾದ ಗುಂಡಿನ ಖಾಲಿ ಕೊಳವೆ , ಒಂದು ಮಚ್ಚು, ನಾಲ್ಕು ಜೀವಂತ ಗುಂಡುಗಳನ್ನು ಒಳಗೊಂಡ ಒಂದು ಮ್ಯಾಗ್ಸಿನ್ , ರಕ್ತದ ಮಾದರಿ ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಅವುಗಳನ್ನು ಮು.ಮಾ.2 ರಿಂದ 7 ಎಂದು ಗುರುತಿಸಲಾಯಿತು. 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆತನನ್ನು ಗುರುತಿಸುವಿಕೆ ಬಗ್ಗೆ 1 ನೇ ಆರೋ ಪಿ ಪರ ವಕೀಲರು ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

<u>ಪಾಟೀಸವಾಲುಃ-</u> ಆರೋಪಿತರ ಪರ ಶ್ರೀಮತಿ ಕೆ ಎನ್ ಯು ವಕೀಲರಿಂದ.

ಆರೋಪಿತರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು , ಕೋರಿಕೆ ಮೇರೆಗೆ ಪಾಟೀಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>

<u>S.C.21/2020</u>

PW- 02

CW- 11

ಪ್ರ. ಬೋ. ದಿನಾಂಕಃ 04-01-2024

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಬಿ ಎಂ ಪ್ರಕಾಶ್ |
| ತಂದೆ/ಗಂಡನ ಹೆಸರು | : | ಮಲ್ಲಪ್ಪ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಬಿದಿರಗಟ್ಟೆ, ಹೊನ್ನಾಳಿ ತಾ. |

<u>ಮುಖ್ಯ ವಿಚಾರಣೆಃ</u> ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ-1 ನನ್ನ ಹೆಂಡತಿ. ಚಾಸಾ-20 ಕಾವ್ಯ ನನ್ನ 1 ನೇ ಮಗಳು. ಚಾಸಾ-9 ನನ್ನ 2 ನೇ ಮಗಳು. ನನಗೆ ನಾಲ್ಕು ಜನ ಮಕ್ಕಳು. ಚಾಸಾ-2 , 3 , 7 , 8 , 9 ರಿಂದ 19 ರ ವರೆಗೆ ನನಗೆ ಗೊತ್ತು. 1 ನೇ ಆರೋಪಿ ದೇವರಾಜ್ ಬಿಕೆ ನನಗೆ ಗೊತ್ತು. ಆತನದು ಬಿದರಗಟ್ಟೆಯಾಗಿರುತ್ತದೆ. ಆತ ಮಿಲ್ಟ್ರಿ ಕೆಲಸ ಮಾಡುತ್ತಾನೆ.

ಚಾಸಾ-20 ಕಾವ್ಯಳು 2019 ರಲ್ಲಿ ದಾವಣಗೆರೆ ಬಾಪೂಜಿ ಕಾಲೇಜಿನಲ್ಲಿ ಬಿಸಿಎ ವ್ಯಾಸಂಗ ಮಾಡುತ್ತಿದ್ದಳು. ಆ ಸಂದರ್ಭದಲ್ಲಿ ಆಕೆ ದಾವಣಗೆರೆ ಸಾಯಿ ಹಾಸ್ಟಲ್ ನಲ್ಲಿ ಇರುತ್ತಿದ್ದಳು. ಆಕೆ ಆ ರೀತಿ ವಿದ್ಯಾಭ್ಯಾಸ ಮಾಡುತ್ತಿದ್ದ ಸಂದರ್ಭದಲ್ಲಿ 1 ನೇ ಆರೋಪಿ ಬಂದು ನನ್ನನ್ನು ಪ್ರೀತಿ ಮಾಡು, ಫೋನ್ ಮಾಡು, ಮೆಸೇಜ್ ಮಾಡು ಎಂದು ಒತ್ತಾಯಿಸುತ್ತಾನೆ ಎಂದು ನನ್ನ ಮತ್ತು ನನ್ನ ಹೆಂಡತಿಗೆ ಮುಂದೆ ಹೇಳುತ್ತಿದ್ದಳು. 1 ನೇ ಆರೋಪಿ ನಮ್ಮ ಊರಿನವನೇ ಆಗಿರುತ್ತಾನೆ. 1 ನೇ ಆರೋಪಿ ರಜೆಕ್ಕೆಂದು ಬಂದ ಸಂದರ್ಭದಲ್ಲಿ ಈ ರೀತಿ ಮಾಡುತ್ತಿದ್ದ. ಈ ಬಗ್ಗೆ ನಾನು ಗ್ರಾಮಸ್ಥರಿಗೆ ವಿಷಯ ತಿಳಿಸಿದ್ದೆ ಆತನನ್ನು ಕರೆಸಿ ಬುದ್ದಿಮಾತು ಹೇಳಿಸಿದ್ದೇವೆ. ಆಗ 1 ನೇ ಆರೋಪಿ ಇನ್ನುಮುಂದೆ ಈ ರೀತಿ ಮಾಡುವುದಿಲ್ಲ, ತಂಗಿ ತರ ನೋಡಿಕೊಳ್ಳುತ್ತೇನೆ ಎಂದು ಹೇಳಿದ್ದ. ಅದಾದ ನಂತರ 1 ನೇ ಆರೋಪಿ ಸ್ವಲ್ಪ ದಿನ ಸುಮ್ಮನೇ ಇದ್ದ. ಸ್ವಲ್ಪ ದಿನಗಳು ಕಳೆದ ನಂತರ ಪುನಃ 1 ನೇ ಆರೋಪಿ

ನನಗೆ ಫೋನ್ ಮಾಡು , ಮೆಸೇಜ್ ಮಾಡು ಎಂದು ತೊಂದರೆ ಕೊಡುತ್ತಿದ್ದಾನೆ, ನೀನು ಆ ರೀತಿ ಮಾಡದಿದ್ದರೆ ನಿನ್ನನ್ನು ಮತ್ತು ನಿನ್ನ ತಂದೆ ತಾಯಿಯನು ಶೂಟ್ ಮಾಡಿ ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕುತ್ತಿದ್ದಾನೆ ಎಂದು ನನ್ನ ಮಗಳು ನಮ್ಮ ಬಳಿ ಹೇಳಿದ್ದಾಳೆ.

1 ನೇ ಆರೋಪಿ ನನ್ನ ಹೆಂಡತಿ ಬಗ್ಗೆ ಅಶ್ಲೀಲವಾಗಿ ಫೇಸ್ ಬುಕ್ ನಲ್ಲಿ - ಹಾದರಗಿತ್ತಿ , ಮಿಂಡ್ರಿ , ನೀನು ಮಲ್ಲಿಗೆನಹಳ್ಳಿ ನಾಗಪ್ಪನ ಹತ್ತಿರ ಹಡಿಸಿಕೊಳ್ಳುತ್ತೀಯಾ, ನೀನು ಲಿಂಗದಹಳ್ಳಿ ಹಾಳು ಮಾಡಿ  ಬಿದಿರಿಗಟ್ಟೆ ಹಾಳು ಮಾಡಲು ಬಂದಿದ್ದಿಯಾ, ಪ್ರಕಾಶ್ , ನೀನು ನನ್ನ ಶಂಟ ಹರಿದುಕೊಳ್ಳಲು ಆಗುವುದಿಲ್ಲ ಎಂದು ಹಾಕಿದ್ದ.  ನನ್ನ ಸಂಬಂಧಿಕರೆಲ್ಲ ಆ ಫೇಸ್ ಬುಕ್ಕನಲ್ಲಿ ಹಾಕಿದ್ದನ್ನು ಗಮನಿಸಿ , ಇವನು ಯಾರು , ಈ ರೀತಿ ಯಾಕೆ ಫೇಸ್ ಬುಕ್ ನಲ್ಲಿ ಹಾಕಿದ್ದಾನೆ , ಅವನ ಮೇಲೆ ನೀವು ಏನು ಮಾಡುತ್ತಿಲ್ಲ ಯಾಕೆ ಎಂದು ಕೇಳಿರುತ್ತಾರೆ. ಆ ಬಗ್ಗೆ 1 ನೇ ಆರೋಪಿಯ ಮೇಲೆ ದೂರನ್ನು ಕೊಟ್ಟು ಹೊನ್ನಾಳಿ ಪೊಲೀಸ್ ಠಾಣೆಗೆ ಕರೆಸಿ , ಪೊಲೀಸರು ಬುದ್ದಿವಾದ ಹೇಳಿ ಕಳುಹಿಸಿದ್ದರು.

ದಿ.24-05-2019 ರಂದು  ರಾತ್ರಿ ಸುಮಾರು 11-00 ರಿಂದ 11-20 ಗಂಟೆ ಸಮಯದಲ್ಲಿ ನಾನು , ನನ್ನ ಹೆಂಡತಿ ಮಕ್ಕಳು ಮನೆಯಲ್ಲಿ ಮಲಗಿದ್ದಾಗ ಮನೆಯ ಮುಂದೆ ಪಟಾಕಿ ಹೊಡೆದ ಶಬ್ದ ಕೇಳಿ ಬಂತು. ನಾನು ಯಾರು ಎಂದುನೋಡಲು ಬಾಗಿಲು ತೆಗೆಯಲು ಹೋದೆ, ನನ್ನ ಹೆಂಡತಿ ಬಾಗಿಲು ತೆಗೆಯಬೇಡಿ ಎಂದು ಹೇಳಿದಳು. ಆ ನಂತರ ನೀಲಕಂಠಪ್ಪ , ನಾಗರಾಜಪ್ಪನಿಗೆ ಫೋನ್ ಮಾಡಿ , ಏನೋ ಶಬ್ದ ಬರುತ್ತಿದೆ, ಬಂದುನೋಡೀ ಎಂದು ಹೇಳಿದೆ. ಸ್ವಲ್ಪ ಹೊತ್ತಿನ ನಂತರ ಬೈಕಿನ ಶಬ್ದ ಬಂತು, ನಾನು ನೀಲಕಂಠಪ್ಪ ಮತ್ತು ನಾಗರಾಜನೇ ಬಂದಿರಬಹುದು ಎಂದು ನಾನು ಬಾಗಿಲು ತೆಗೆದೆವು.  ಬಾಗಿಲು ತೆಗೆದ ಕೂಡಲೇ ಬಾಗಿಲ ಮುಂದೆ 1 ನೇ ಆರೋಪಿ ತನ್ನ ಕೈಯಲ್ಲಿ ಗನ್ ಹಿಡಿದು ನಿಂತಿದ್ದ. 1 ನೇ ಆರೋಪಿ ಎರಡೂ ಕೈಗಳಲ್ಲಿ ಗನ್ ಹಿಡಿದವನೇ ನೇರವಾಗಿ ನನ್ನ ಹೊಟ್ಟೆಯ ಭಾಗಕ್ಕೆ ಎರಡು ಗುಂಡನ್ನು ಹೊಡೆದ . ನಂತರ ನನ್ನ ಹೆಂಡತಿ ಮಕ್ಕಳಿಗೆ ಹೊಡೆಯುತ್ತಾನೆ ಎಂದು  ನಾನು ಸ್ವಲ್ಪ ದೂರ ಓಡಿಸಿಕೊಂಡು ಹೋದೆ. ಅಷ್ಟರಲ್ಲಿ ನನಗೆ ಸುಸ್ತಾಗಿ ಕುಸಿದು ಬಿದ್ದೆ. 1 ನೇ ಆರೋಪಿ ಮಲ್ಲಿಕಾರ್ಜುನ ದೇವಸ್ಥಾನದ ಕಡೆ ಓಡಿ ಹೋದ. ಆ ನಂತರ ಮಧು ಮತ್ತು ಮಂಜು ಎನ್ನುವವರು ಬಂದು ಗಾಯವಾಗಿದೆ ಎಂದು ನನ್ನನ್ನು ಹೊನ್ನಾಳಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿ ವೈದ್ಯರು ಇಲ್ಲಿ ಆಗುವುದಿಲ್ಲ ಎಂದು ಹೇಳಿದ್ದರಿಂದ

ಶಿವಮೊಗ್ಗದ ಮೆಟ್ರೋ ಆಸ್ಪತ್ರೆಗೆ ಸೇರಿಸಿದ್ದಾರೆ. ನಾನುಸದರಿ ಆಸ್ಪತ್ರೆಯಲ್ಲಿ 15 ದಿನ ಚಿಕಿತ್ಸೆ ಪಡೆದಿರುತ್ತೇನೆ. ಆಸ್ಪತ್ರೆಯಲ್ಲಿ ನನಗೆ ಶಸ್ತ್ರ ಚಿಕಿತೆ ಮೂಲಕ ಒಂದು ಗುಂಡು ತೆಗೆದಿದ್ದಾರೆ. ಇನ್ನೊಂದು ಗುಂಡು ಹೊಟ್ಟೆಯಲ್ಲಿಯೇ ಇರುತ್ತದೆ. ಸಾಕ್ಷಿ ತನ್ನ ಹೊಟ್ಟೆಯನ್ನು ತೋರಿಸಿ ಶಸ್ತ್ರ ಚಿಕಿತ್ಸೆ ಮಾಡಿದ್ದ ಗುರುತನ್ನು ತೋರಿಸಿರುತ್ತಾರೆ. ದುಡ್ಡು ಕಾಸಿನ ವ್ಯವಸ್ಥೆ ಇಲ್ಲದೇಯಿರುವುದರಿಂದ ಖರ್ಚು ಹೆಚ್ಚು ಬರುತ್ತದೆ ಎಂದು ಇನ್ನು ಇನ್ನೊಂದು ಗುಂಡನ್ನು ತೆಗೆಸಿರುವುದಿಲ್ಲ. ನನ್ನ ಮಗಳನ್ನು 1 ನೇ ಆರೋಪಿಗೆ ಕೊಟ್ಟು ಮದುವೆ ಮಾಡಲಿಲ್ಲ ಎಂದು ಅವನು ಈ ರೀತಿ ಮಾಡಿದ್ದಾನೆ. ನಾವು ನಮ್ಮ ಮಗಳಿಗೆ ಆತನನ್ನು ಲೌ ಮಾಡಲು ಸಹಾಯ ಮಾಡಲಿಲ್ಲ ಎಂದು 1 ನೇ ಆರೋಪಿ ಈ ರೀತಿ ಮಾಡಿದ್ದಾನೆ. 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಗುರುತಿಸುವಿಕೆ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕಿಯ ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>

<u>S.C.21/2020</u>

PW- 01

CW- 01

ಪ್ರ. ಬೋ. ದಿನಾಂಕಃ 04-01-2024

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | L B ನಾಗರತ್ನ |
| ತಂದೆ/ಗಂಡನ ಹೆಸರು | : | ಬಿ ಎಂ ಪ್ರಕಾಶ್ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ | : | ಬಿದರಗಟ್ಟೆ, ಹೊನ್ನಾಳಿ ತಾ. |

<u>ಮುಖ್ಯ ವಿಚಾರಣೆಃ</u> ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ-11 ನನ್ನ ಗಂಡ. ಚಾಸಾ-20 ಕಾವ್ಯ ನನ್ನ 1 ನೇ ಮಗಳು. ಚಾಸಾ-9 ನನ್ನ 2 ನೇ ಮಗಳು. ನನಗೆ ನಾಲ್ಕು ಜನ ಮಕ್ಕಳು. 1 ನೇ ಆರೋಪಿ ದೇವರಾಜ್ ಬಿಕೆ ನನಗೆ ಗೊತ್ತು. ಆತನದು ಬಿದರಗಟ್ಟೆಯಾಗಿರುತ್ತದೆ. ಆತ ಮಿಸ್ತ್ರಿ ಕೆಲಸ ಮಾಡುತ್ತಾನೆ.

ಚಾಸಾ-20 ಕಾವ್ಯಳು 2019 ರಲ್ಲಿ ದಾವಣಗೆರೆ ಬಾಪೂಜಿ ಕಾಲೇಜಿನಲ್ಲಿ ಬಿಸಿಎ ವ್ಯಾಸಂಗ ಮಾಡುತ್ತಿದ್ದಳು. ಆ ಸಂದರ್ಭದಲ್ಲಿ ಆಕೆ ದಾವಣಗೆರೆ ಹಾಸ್ಟಲ್ ನಲ್ಲಿ ಇರುತ್ತಿದ್ದಳು. ಆಕೆ ಆ ರೀತಿ ವಿದ್ಯಾಭ್ಯಾಸ ಮಾಡುತ್ತಿದ್ದ ಸಂದರ್ಭದಲ್ಲಿ 1 ನೇ ಆರೋಪಿ ಚಾಸಾ-20 ಕಾವ್ಯಾಳಿಗೆ ನನ್ನನ್ನು ಪ್ರೀತಿ ಮಾಡು , ಫೋನ್ ಮಾಡು, ಮದುವೆಯಾಗು ಎಂದು ನನ್ನ ಮತ್ತು ನನ್ನ ಗಂಡನ ಮುಂದೆ ಹೇಳುತ್ತಿದ್ದಳು. ಈ ವಿಚಾರವನ್ನು ಗ್ರಾಮಸ್ಥರಿಗೆ ತಿಳಿಸಿ , ಅವರ ಕಡೆಯಿಂದ 1 ನೇ ಆರೋಪಿಗೆ ಬುದ್ದಿಮಾತು ಹೇಳಿಸಿದ್ದೇವೆ. ಆಗ 1 ನೇ ಆರೋಪಿ ಇನ್ನುಮುಂದೆ ಈ ರೀತಿ ಮಾಡುವುದಿಲ್ಲ ಎಂದು ಒಪ್ಪಿಕೊಂಡು ಹೋಗಿದ್ದ. ಸ್ವಲ್ಪ ದಿನಗಳ ನಂತರ ನನ್ನ ಮಾಳು ಕಾವ್ಯಾ ಳು 1 ನೇ ಆರೋಪಿ ಪುನಃ ನನಗೆ ಫೋನ್ ಮಾಡು , ಮೆಸೇಜ್ ಮಾಡು ಎಂದು ತೊಂದರೆ ಕೊಡುತ್ತಿದ್ದಾನೆ, ನೀನು ಆ ರೀತಿ ಮಾಡದಿದ್ದರೆ ನಿನ್ನನ್ನು ಮತ್ತು ನಿನ್ನ ತಂದೆ ತಾಯಿಯನು ಶೂಟ್ ಮಾಡುತ್ತೇನೆ ಎಂದು ಬೆದರಿಕೆ ಹಾಕುತ್ತಿದ್ದಾನೆ ಎಂದು ನನ್ನ ಮಗಳು ನನ್ನ ಬಳಿ ಹೇಳಿದ್ದಾಳೆ.

ದಿ.24-05-2019 ರಂದು ರಾತ್ರಿ 11-20 ಗಂಟೆ ಸಮಯದಲ್ಲಿ ನಾವು ಮಲಗಿದ್ದಾಗ ಮನೆಯ ಮುಂದೆ ಪಟಾಕಿ ಹೊಡೆದ ಶಬ್ದ ಬಂತು. ನಾವು ಏನೋ ಶಬ್ದ ಬರುತ್ತಿದೆ ಎಂದು ಗಾಭರಿಯಿಂದ ಎದ್ದು, ನನ್ನ ಗಂಡ ಬಾಗಿಲು ತೆಗೆಯಲು ಹೋದಾಗ , ಬಾಗಿಲು ತೆಗೆಯಬೇಡಿ , ಊರಿನ ಗ್ರಾಮಸ್ಥರಿಗೆ ತಿಳಿಸೋಣ ಎಂದು ನಮ್ಮ ಗ್ರಾಮ ಪಂಚಾಯಿತಿಯ ನಾಗರಾಜಪ್ಪ ಮತ್ತು ಬಿ ಹೆಚ್ ನಿಲಕಂಠಪ್ಪ ಇವರಿಗೆ ಮನೆ ಮುಂದೆ ಪಟಾಕಿ ಶಬ್ದ ಆಗುತ್ತಿದೆ ಎಂದು ಫೋನ್ ಮೂಲಕ ತಿಳಿಸಿದೆವು. ಆ ಸಮಯದಲ್ಲಿ ಬೈಕ್ ಬಂದ ಶಬ್ದ ಬಂದಿದ್ದರಿಂದ ಅವರೇ ಬಂದಿದ್ದಾರೆ ಎಂದು ನಾವು ಬಾಗಿಲು ತೆಗೆದೆವು. ಬಾಗಿಲು ತೆಗೆದ ಕೂಡಲೇ ಬಾಗಿಲ ಮುಂದೆ 1 ನೇ ಆರೋಪಿ ತನ್ನ ಕೈಯಲ್ಲಿ ಬಂದೂಕು ಹಿಡಿದು ನಿಂತಿದ್ದ. ನಮ್ಮ ಮನೆಯವರ ಕಡೆ ಎರಡು ಗುಂಡನ್ನು ಬಂದೂಕಿನಿಂದ ಹೊಡೆದ. ಸದರಿ ಗುಂಡುಗಳು ನನ್ನ ಗಂಡನ ಹೊಟ್ಟೆಗೆ ಬಿದ್ದವು , ಆಗ ನಾನು ಚೀರಿಕೊಂಡೆ. ನನ್ನ ಗಂಡ ಅದನ್ನು ಲೆಕ್ಕಿಸದೇ ತಡೆಯೋ ಬಂದೆ ಎಂದು ಹೇಳಿದರು, ಆಗ 1 ನೇ ಆರೋಪಿ ಕೂಡಲೇ ಮಲ್ಲಿಕಾರ್ಜುನ ದೇವಸ್ಥಾನದ ಕಡೆ ಓಡಿ ಹೋದ . ನನ್ನ ಗಂಡ ನಮ್ಮ ಮನೆಯವರಿಗೆ ಏನಾದರೂ ಮಾಡುತ್ತಾನೆ ಎಂದು ಆರೋಪಿಯನ್ನು ಬೆನ್ನು ಹತ್ತಿ ಹೋದರು, ಸ್ವಲ್ಪ ದೂರ ಹೊದ ಕೂಡಲೇ ಸುಸ್ತಾಗಿ ನೆಲಕ್ಕೆ ಬಿದ್ದರು, ಆಗ ಅಕ್ಕಪಕ್ಕದವರಾದ ಆದರ್ಶಣ್ಣ, ಮಂಜಣ್ಣ , ಸತೀಶ್ , ಶಶಿಕಾಂತ , ಮಧು ಬಿಹಚ್ ರವರು ಬಂದರು. ಗುಂಡು ಹೊಡೆದಿದ್ದರಿಂದ ನನ್ನ ಗಂಡನ ಹೊಟ್ಟೆಗೆ ಗಾಯವಾಗಿ ರಕ್ತ ಬರುತ್ತಿತ್ತು. ಅವರೆಲ್ಲ ಸೇರಿ ನನ್ನ ಗಂಡನನ್ನು ಬಿಎಸ್ ನೀಲಕಂಠಪ್ಪನ ಕಾರಿನಲ್ಲಿ ಹೊನ್ನಾಳಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿ ವೈದ್ಯರು ಇಲ್ಲಿ ಆಗುವುದಿಲ್ಲ ಎಂದು ಹೇಳಿದ್ದರಿಂದ ಶಿವಮೊಗ್ಗದ ಮೆಟ್ರೋ ಆಸ್ಪತ್ರೆಗೆಸೇರಿಸಿದ್ದಾರೆ. ಆ ನಂತರ ನಾನು ಈ ಬಗ್ಗೆ ದೂರು ನೀಡಿದ್ದೇನೆ.

ಈ ಹಂತದಲ್ಲಿ ನ್ಯಾಯಾಲಯದ ಸಮಯವಾಗಿದ್ದರಿಂದ ಮುಂದುವರೆದು ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

ಇಂದು ದಿ.05-01-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣಿಕರಿಸಲಾಂತು.

ಮುಂದುವರೆದು ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಸಾಕ್ಷಿ ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ.1 ಎಂದು , ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

ಅದೇ ದಿನ ರಾತ್ರಿ ನಮ್ಮ ಮನೆಯ ಮುಂದೆ ಮೂರು ಖಾಲಿ ಗುಂಡು ಬಿದ್ದಿದ್ದನ್ನು , ಒಂದು ಗುಂಡು ತುಂಬಿದ್ದ ಸ್ಟೀಲ್ ಪೈಸ್, ಅರ್ಧ ಮಾರಿನಷ್ಟು ಉದ್ದ ಇದ್ದ ಒಂದು ಮಚ್ಚು ಬಿದ್ದಿದ್ದವು, ಅವುಗಳನ್ನು ಗಮನಿಸಿರುತ್ತೇನೆ. ಅವುಗಳನ್ನು ಪೊಲೀಸರು ಬಂದು ತೆಗೆದುಕೊಂಡು ಹೋಗಿದ್ದಾರೆ.

ನನ್ನ ಮಗಳು ಚಾಸಾ-20 ಕಾವ್ಯಾ.1 ನೇ ಆರೋಪಿಯನ್ನು ಪ್ರೀತಿ ಮಾಡಲು ಒಪ್ಪುತ್ತಿಲ್ಲ ಎಂದು , ನಾವು ಅಡ್ಡಿ ಮಾಡುತ್ತೇವೆ ಎಂದು ಆರೋಪಿ ನಮ್ಮನ್ನು ಕೊಲೆ ಮಾಡಲು ಪ್ರಯತ್ನಿಸಿದ್ದಾನೆ. 1 ನೇ ಆರೋಪಿ ಈ ಹಿಂದೆ ಎರಡು ಬಾರಿ ಇದೇ ರೀತಿ ಗಲಾಟೆ ಮಾಡಿದ್ದ, ಆ ಬಗ್ಗೆ ಊರಿನಲ್ಲಿ ಪಂಚಾಯಿತಿಗಳು ಆಗಿದ್ದವು. ಆ ಬಗ್ಗೆ ಬುದ್ದಿವಾದ ಹೇಳಿ ಕಳುಹಿಸಿದ್ದರು.

1 ನೇ ಆರೋಪಿ ಜೈಲಿನಲ್ಲಿದ್ದ ಸಂದರ್ಭದಲ್ಲಿ ನಂ.9902598171 ರ ಮೋಬೈಲ್ ನಂಬರ್ ನಿಂದ ನನ್ನ ಗಂಡನ ಮೋಬೈಲ್ ನಂ.9916014495 ಗೆ ಕರೆ ಮಾಡಿದ , ನಾನು ಕರೆಯನ್ನು ಸ್ವೀಕರಿಸಿದೆ, ನಿಮ್ಮ ಕಾವ್ಯಾಳಿಗೆ ಹ್ಯಾಪಿ ಬರ್ತ್‌ಡೆ ತಿಳಿಸಲು ಮಾಡಿದ್ದೇನೆ ಎಂದು ಹೇಳಿದೆ. ನಾನು ಹೇಳುತ್ತೇನೆ ಎಂದು ಹೇಳಿದ್ದೆ. ಈ ಬಗ್ಗೆ ಗಾಭರಿಗೊಂಡು ಮತ್ತೊಮ್ಮೆ ನಾನು ಹೊನ್ನಾಳಿ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದ್ದೇನೆ.

ಸಾಕ್ಷಿ ಮತ್ತೊಂದು ದೂರಿನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು , ದೂರನ್ನು ನಿಪಿ.2 ಎಂದು , ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

1 ನೇ ಆರೋಪಿ ನನ್ನ ಮೇಲೆ ದ್ವೇಷ ತೀರಿಸಿಕೊಳ್ಳಲು ಫೇಸ್ ಬುಕ್ ನಲ್ಲಿ - ಹಾದರಗಿತ್ತಿ , ಮಿಂಡ್ರಿ , ನೀನು ಮಲ್ಲಿಗೆನಹಳ್ಳಿ ನಾಗಪ್ಪನ ಹತ್ತಿರ ಹಡಿಸಿಕೊಳ್ಳುತ್ತೀಯಾ, ನೀನು ಲಿಂಗದಹಳ್ಳಿ ಹಾಳು ಮಾಡಿ ಬಿದಿರಿಗಟ್ಟೆ ಹಾಳು ಮಾಡಲು ಬಂದಿದ್ದಿಯಾ, ಪ್ರಕಾಶ್,

ನೀನು ನನ್ನ ಶಂಟ ಹರಿದುಕೊಳಳಲು ಆಗುವುದಿಲ್ಲ - ಎಂದು ಹಾಕಿದ್ದ. ನನ್ನ ಸಂಬಂಧಿಕರೆಲ್ಲ ಆ ಫೇಸ್ ಬುಕ್ಕನಲ್ಲಿ ಹಾಕಿದ್ದನ್ನು ಗಮನಿಸಿ , ಇವನು ಯಾರು , ಈ ರೀತಿ ಯಾಕೆ ಫೇಸ್ ಬುಕ್ ನಲ್ಲಿ ಹಾಕಿದ್ದಾನೆ , ಅವನ ಮೇಲೆ ನೀವು ಏನು ಮಾಡುತ್ತಿಲ್ಲ ಯಾಕೆ ಎಂದು ಕೇಳಿರುತ್ತಾರೆ. ನಾನು ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರೂ ಸಹ ಹಳೆಯದ್ವೇಷದಿಂದ ಈ ರೀತಿ ಮಾಡಿದ್ದಾನೆ ಎಂದು ನಾನು ಅವರಿಗೆ ಸಮಜಾಯಿಶಿ ನೀಡಿದ್ದೇನೆ.

ಸಾಕ್ಷಿ ಎರಡು ಫೋಟೋಗಳಲ್ಲಿರುವ ಮನೆ ನಮ್ಮದು ಎಂದು ತಿಳಿಸಿದ್ದು , ಸದರಿ ಫೋಟೋಗಳನ್ನು ನಿಪಿ.3 ಮತ್ತು 4 ಎಂದು ಗುರುತಿಸಲಾಯಿತು.

ನನ್ನ ಗಂಡನನ್ನು ಹೊನ್ನಾಳಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಇಲ್ಲಿ ಆಗುವುದಿಲ್ಲ ಎಂದು ತಿಳಿಸಿದರು ,ಅಲ್ಲಿಂದ ಶಿವಮೊಗ್ಗದ ಮೆಟ್ರೊ ಆಸ್ಪತ್ರೆಗೆ ಕರೆದುಕೂಂಡು ಹೋಗಿ ದಾಖಲಿಸಿದ್ದೇವೆ. ಸದರಿ ಆಸ್ಪತ್ರೆಯಲ್ಲಿ ನನ್ನ ಗಂಡ 15 ದಿನಗಳ ಕಾಲ ಚಿಕಿತ್ಸೆ ಪಡೆದಿದ್ದಾರೆ. ಹೊನ್ನಾಳಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ನನ್ನ ಗಂಡನಿಗೆ ಪ್ರಜ್ಞೆ ಇರಲಿಲ್ಲ. ಆಸ್ಪತ್ರೆಯಲ್ಲಿ ನಾನೇ ನನ್ನ ಗಂಡನನ್ನು ನೋಡಿಕೊಳ್ಳುತ್ತಿದ್ದೆ. ಆಸ್ಪತ್ರೆಯಲ್ಲಿ ನನ್ನ ಗಂಡನಿಗೆ ಶಸ್ತ್ರಚಿಕಿತ್ಸೆ ಮಾಡಿ , ನನ್ನ ಗಂಡನ ಹೊಟ್ಟೆಯಲ್ಲಿದ್ದ ಒಂದು ಗುಂಡನ್ನು ತೆಗೆದಿದ್ದರು. ಆಸ್ಪತ್ರೆಯಲ್ಲಿ ತೆಗೆದ ಗುಂಡನ್ನು ನೋಡಿದರೆ ಗುರುತಿಸುತ್ತೇನೆ. ಶೀಲ್ ಆಗಿರುವ ಬ್ಯಾಗನ್ನು ತೆರೆಯಲಾಯಿತು.

ಸಾಕ್ಷಿ ಸದರಿ ಬ್ಯಾಗ್ ನಲ್ಲಿರುವ ಗುಂಡನ್ನು ನೋಡಿ ಗುರುತಿಸಿದ್ದು, ಸದರಿ ಗುಂಡನ್ನು ಸುನಿಲ್ ಡಾಕ್ಟರ್ ನನ್ನ ಗಂಡನ ಹೊಟ್ಟೆಯಿಂದ ತೆಗೆದಿದ್ದಾರೆ ಎಂದು ನುಡಿದಿರುತ್ತಾರೆ . ಸದರಿ ಗುಂಡನ್ನು ಮು.ಮಾ.1 ಎಂದು ಗುರುತಿಸಲಾಯಿತು.

1 ನೇ ಆರೋಪಿಯು 2 ನೇ ಆರೋಪಿಕಡೆಯಿಂದ ಪಿಸ್ತೂಲ್ ತೆಗೆದುಕೊಂಡು ಬಂದು ಈ ರೀತ ಮಾಡಿದ್ದಾನೆ ಎಂದು ನನಗೆ ಗೊತ್ತಾಗಿರುತ್ತದೆ. 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. 1 ನೇ ಆರೋಪಿಯನ್ನು ಗುರುತಿಸುವ ಬಗ್ಗೆ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

<u>ಪಾಟೀಸವಾಲುಃ-</u> ಆರೋಪಿತರ ಪರ ಶ್ರೀಮತಿ ಕೆ ಎನ್ ಯು ವಕೀಲರಿಂದ.

ಆರೋಪಿ ಪರ ವಕೀಲರು ಈ ಸಾಕ್ಷಿಯ ಮತ್ತು ಚಾಸಾ-11, 20 ರವರ ಪಾಟೀಸವಾಲನ್ನು ಒಟ್ಟಿಗೆ

ಮಾಡುತ್ತೇನೆ ಎಂದು ತಿಳಿಸಿದ್ದರಿಂದ ಪಾಟೀಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.